# ಭಾರೀ ಭೂಕುಸಿತಕ್ಕೆ ತುತ್ತಾದ ಪಪುವಾ ನ್ಯೂಗಿನಿಗೆ 1 ಮಿಲಿಯನ್ ಡಾಲರ್ ತುರ್ತು ನೆರವು ಘೋಷಿಸಿದ ಭಾರತ

ಮೇ 28, 2024

ಪಪುವಾ ನ್ಯೂಗಿನಿಯ ಎಂಗಾ ಪ್ರಾಂತ್ಯದಲ್ಲಿ ಮೇ 24, 2024 ರಂದು ಭಾರೀ ಭೂಕುಸಿತ ಸಂಭವಿತ್ತು. ಇದರಿಂದ ನೂರಕ್ಕೂ ಹೆಚ್ಚು ಜನರು ಭೂ ಸಮಾಧಿಯಾಗಿದ್ದರು. ಅಲ್ಲದೆ ಭಾರೀ ಹಾನಿ ಉಂಟಾಗಿತ್ತು.

2.ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ತೀವ್ರ ಸಂತಾಪ ಸೂಚಿಸಿದ್ದು, ಈ ಕಷ್ಟಕಾಲದಲ್ಲಿ ಪೆಸಿಫಿಕ್ ದ್ವೀಪ ರಾಷ್ಟ್ರಕ್ಕೆ ಸಾಧ್ಯವಿರುವ ಎಲ್ಲಾ ರೀತಿಯಲ್ಲಿಯೂ ಬೆಂಬಲ ನೀಡಲು ಭಾರತ ಸಿದ್ಧ ಇರುವುದಾಗಿ ಹೇಳಿದ್ದಾರೆ.

3.ಮಿತ್ರ ರಾಷ್ಟ್ರ ಹಾಗೂ ಭಾರತ-ಪೆಸಿಫಿಕ್ ದ್ವೀಪ ರಾಷ್ಟ್ರಗಳ ಸಹಕಾರ ವೇದಿಕೆಯ (ಎಫ್ಐಪಿಐಸಿ) ಅಡಿಯಲ್ಲಿ ಪಾಲುದಾರ ರಾಷ್ಟ್ರವಾಗಿರುವ, ಪಪುವಾ ನ್ಯೂ ಗಿನಿಯಾದ ಸ್ನೇಹಜೀವಿ ಜನರೊಂದಿಗಿನ ಐಕ್ಯಮತ್ಯದ ದ್ಯೋತಕವಾಗಿ ಭಾರತ ಸರ್ಕಾರವು ಪರಿಹಾರ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾರ್ಯಗಳಿಗಾಗಿ 1 ಮಿಲಿಯನ್ ಡಾಲರ್ ತುರ್ತು ನೆರವನ್ನು ಘೋಷಿಸಿದೆ.

4.ಪಪುವಾ ನ್ಯೂಗಿನಿಯಲ್ಲಿ ಪ್ರಾಕೃತಿಕ ವಿಕೋಪದಂತಹ ಕಷ್ಟ ಕಾಲದಲ್ಲಿ ಭಾರತವು ಅದರ ಜೊತೆಗೆ ನಿಂತಿದೆ. 2018ರಲ್ಲಿ ಸಂಭವಿಸಿದ್ದ ಭೂಕಂಪ ಹಾಗೂ 2019 ಮತ್ತು 2023ರಲ್ಲಿ ಜ್ವಾಲಾಮುಖಿ ಸ್ಫೋಟ ಆದಾಗ ಭಾರತವು ನೆರವಿಗೆ ಧಾವಿಸಿತ್ತು. ವಿಪತ್ತಿನ ಅಪಾಯ ತಗ್ಗಿಸುವಿಕೆ ಮತ್ತು ನಿರ್ವಹಣೆಯು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು 2019ರಲ್ಲಿ ಘೋಷಿಸಿದ್ದ, ಭಾರತದ 'ಇಂಡೊ-ಪೆಸಿಫಿಕ್ ಸಾಗರಗಳ ಉಪಕ್ರಮ'ದ (ಐಪಿಒಐ) ಪ್ರಮುಖ ಆಧಾರ ಸ್ತಂಭವಾಗಿತ್ತು. 'ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಎಚ್ಎಡಿಆರ್) ನೀಡಲು ಮತ್ತು ಜವಾಬ್ದಾರಿಯುತ ಮತ್ತು ದೃಢ ಜೊತೆಗಾರನಾಗಿ ಮುಂದುವರಿಯಲು ಭಾರತ ಬದ್ಧವಾಗಿದೆ.

ನವದೆಹಲಿ

**ಮೇ 28, 2024**